INTERNATIONAL INDIAN SCHOOL, DAMMAM

ANNUAL EXAM – 2017 – 18 TIME: 3 Hrs.

THIRD LANGUAGE – KANNADA MARKS: 80

CLASS- VIII B.M.S & G.M.S

GENERAL INSTRUCTIONS:

1. Read all questions carefully before answering.
2. Answers should be numbered as in the question paper.

---

**1. ಸರಿಯಾದ ಪದವನ್ನು ಆರಿಸಿ ಕೆಳಗಿನ ವಾಕ್ಯಗಳನ್ನು ಪೂರ್ತಿಗೊಳಿಸಿರಿ: [ 1 X 10 = 10 ]**

೧. ಅವರನು ಉಳಿಸಲು ____________ ಮುಳುಗಿ . [ ನೀರೋಳು, ಹಾಲಿನಲಿ, ಕ್ಷೀರದಲಿ ]

೨. ಅದು ಭಯದಿಂದ ತನ್ನ _______ ಯನ್ನು ಎದೆಗೆ ಅಪ್ಪಿಕೊಂಡಿತು. [ ಸಿರಿ, ಮರಿ, ಕುರಿ ]

೩. ಅದಕ್ಕೆ ಒಳ್ಳೆಯ ಆಹಾರವನ್ನು ಕೊಟ್ಟು ___________ದಿಂದ ಮುಕ್ತಗೊಳಿಸಿದನು. [ ಬಂಧನ, ಮನೆ, ನೀರು ]

೪. ತೃತೀಯಾ ಸ್ಥಾನ ಪಡೆದವರಿಗೆ __________ ಪದಕವನ್ನು ನೀಡುತ್ತಾರೆ. [ ಬೆಳ್ಳಿ, ಚಿನ್ನ, ಕಂಚು ]

೫. _________ ರಿಂದ ಕ್ರೀಡಾಕೂಟಗಳನ್ನು ಮತ್ತೆ ಆರಂಭಿಸಲಾಯಿತು. [ ೧೮೫೯, ೧೯೫೯, ೧೭೫೯ ]

೬. ರಾಜನಿಗೆ ಅದರ ____________ ವನ್ನು ಕಂಡು ಬಹಳ ಸಂತೋಷವಾಯಿತು. [ ದುರ್ಗುಣ, ಸದ್ಗುಣ, ಗುಣ ]

೭. ಪಂಡಿತನು ________ ಭಯದಿಂದ ನಡುಗತೊಡಗಿದನು. [ ಪ್ರಾಣ, ತ್ರಾಣ, ನಿತ್ರಾಣ ]

೮. _________ ಯ ಸ್ಥಿತಿ ಡೋಲಾಯಮಾನವಾಯಿತು. [ ದೋಣಿ, ಗೋಣಿ, ಓಣಿ ]

೯. ____________ನಾಗಿ ಹುಟ್ಟಿದವನು ವಿದ್ಯಾಬುದ್ಧಿ ಕಲಿಯಲೇಬೇಕು. [ ಜೀವ, ಮನುಷ್ಯ, ದಾನವ ]

೧೦. ಮತದಾರರ ತಲೆ __________ ಬಂದಿರುವೆನಲ್ಲ. [ ಎಣಿಸಿ, ಉಣಿಸಿ, ತಣಿಸಿ ]

**2. ಈ ಸಾಲುಗಳನ್ನು ಸರಿಪಡಿಸಿ ಬರೆಯಿರಿ: [ 1 X 2 = 2 ]**

೧. ಬರದು ಬಾಧಕವು ಬಿಕ್ಕಟ್ಟು ಏನಿಲ್ಲ.

೨. ಹೇಳಿ ಬಾಯ್ಬಿಟ್ಟು ಇದ್ದುದ್ದೇನ ಇರಲಿ.

**3. ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ: [ 1 X 2 = 2]**

೧. ಕೆಲಸ, ಕಾರ್ಯ, ಕಾಲ, ಉದ್ಯೋಗ

೨. ಕಾಡು, ವನ, ನಾಡು, ಅರಣ್ಯ

**4. ವಚನ ಬದಲಾಯಿಸಿ: [ ½ X 4 = 2 ]**

೧. ಬಾಲಕಿಯರು ೨. ಯುವಕ ೩. ಸದಸ್ಯ ೪. ಯುವತಿ

**5. ಈ ವಾಕ್ಯಗಳನ್ನು ಸರಿ / ತಪ್ಪು ಎಂದು ಗುರುತಿಸಿ ಬರೆಯಿರಿ: [ 1 X 2 = 2 ]**

೧. ಹತ್ತು ಪ್ರಶ್ನೆಯ ಕೇಳುವೆನು ನಿಮಗೆ

೨. ತಿರುಳನು ತಿಳಿಯುತ ಪಡೆಯಿರಿ ಜ್ಞಾನ

6.ಈ ಮಾತನ್ನು ಯಾರು ಯಾರಿಗೆ ಹೇಳಿದರು? [ 1 X 3 = 3 ]

೧. "ನಿನ್ನ ಲೋಕ ಜ್ಞಾನವನ್ನು ನಾನು ಗೌರವಿಸುತ್ತೇನೆ"

೨. "ಅದನ್ನೆಲ್ಲಾ ಓದಿದರೆ ಹೊಟ್ಟೆ ತುಂಬುವುದೇ ಸ್ವಾಮಿ?"

೩. "ಹಾಗಾದರೆ ಇವುಗಳನ್ನು ನಾನೇ ಕೊಳ್ಳುತ್ತೇನೆ."

**7. ಈ ಕೆಳಗಿನ ಹತ್ತು ಪದಗಳ ಅರ್ಥ ಬರೆಯಿರಿ: [ ½ X 10 = 5 ]**

೧. ಬಾಧಕ ೨. ಪತನ ೩. ಇರುಳು ೪. ಪಂಡಿತ ೫. ಇಮ್ಮಡಿ ೬. ತಿರುಳು

೭. ಸಜ್ಜನರ ಸಹವಾಸ ೮. ನಿಗದಿಪಡಿಸು ೯. ಅಂತರ ೧೦. ಗುಣಿಗಿ ೧೧. ಅವಶೇಷ ೧೨. ಕ್ರೀಡೆ

**8. ನಾಲ್ಕು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ: [ 1 X 4 = 4 ]**

೧. ದಯಮಾಡಿಸಿದ ೨. ನಿಯಂತ್ರಣ ೩. ಸಂಚಾರ ೪. ಸಮೀಪ ೫. ಗುಟ್ಟು

**9. ಬಿಟ್ಟ ಸ್ಥಳ ತುಂಬಿಸಿ: [ 1 X 4 = 4 ]**

೧. ಗುಣ + ವಂತ = ______________

೨. ಅಮೇರಿಕೆಯ ಲಾಸ್ಏಂಜಲ್ಸ್ ನಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ____________ ದೇಶಗಳು ಪಾಲ್ಗೊಂಡಿದ್ದವು.

೩. ಪ್ರತಿ __________ ವರ್ಷಕ್ಕೊಮ್ಮೆ ರಾಷ್ಟ್ರಮಟ್ಟದಲ್ಲಿ ಜನಗಣತಿ ಕಾರ್ಯವು ನಡೆಯುತ್ತದೆ.

೪. ಆಗ ಬೀರಬಲ್ಲನು ತಕ್ಷಣವೇ ತನ್ನ ____________ಗಳನ್ನು ನಿಲ್ಲಿಸಿದನು.

**10. ಮೂರು ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ: [ 1 X 3 = 3 ]**

೧. ಬಹುಮಾನ ೨. ಸಿದ್ಧತೆ ೩. ಗಿಣಿಗಳು ೪. ಅರಮನೆ

11. ಕನ್ನಡ ಸಂಖ್ಯಾನಾಮಗಳನ್ನು ಬರೆಯಿರಿ: [ ½ X 6 = 3 ]

1) ೧೦೦ 2) ೯೭ 3) ೮೩ 4) ೭೪ 5) ೬೮ 6) ೫೫

12. ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: [ 1 X 10 = 10 ]

೧. ಪಂಡಿತನು ಪಕ್ಕದ ಊರಿಗೆ ಹೇಗೆ ಹೋಗಬೇಕಾಗಿತ್ತು?

೨. ಅಂಬಿಗನು ಮೌನವಾಗಿದ್ದು ಏನು ಮಾಡುತ್ತಿದ್ದನು?

೩. ಜನಗಣತಿದಾರ ಎಷ್ಟು ವರ್ಷಕ್ಕೊಮ್ಮೆ ಅವತಾರ ಮಾಡುತ್ತಾನೆ?

೪. ಜನಗಣತಿದಾರ ಪದ್ಯ ಬರೆದ ಕವಿ ಯಾರು?

೫. ನಾಲ್ಕು ದಿನಗಳ ನಂತರ ರಾಜನ ಅರಮನೆಗೆ ಯಾರು ಬಂದರು?

೬. ಎಡಗೈಯಲ್ಲಿದ್ದ ಗಿಣಿಯ ಬೆಲೆ ಎಷ್ಟು ರೂಪಾಯಿ?

೭. ವೈಯಕ್ತಿಕ ಕ್ರೀಡಾಸ್ಪರ್ಧೆಯಲ್ಲಿ ಎಷ್ಟು ಜನ ಭಾಗವಹಿಸಬಹುದು?

೮. ೧೯೮೪ ರ ಒಲಂಪಿಕ್ ಕ್ರೀಡೆಗಳು ಎಲ್ಲಿ ನಡೆದವು?

೯. ಕೋತಿಯು ಯಾವಾಗ ಆತಂಕಗೊಂಡಿತು?

೧೦. ಮಾನವನಿಗೆ ಹೆಚ್ಚು ಪ್ರಿಯವಾದುದು ಯಾವುದು?

೧೧. ಜನರು ಯಾರನ್ನು ಉಳಿಸಲು ನೀರಿನಲ್ಲಿ ಮುಳುಗುತ್ತಾರೆ?

೧೨. ಸೂರ್ಯಗ್ರಹಣ ಹೇಗೆ ಉಂಟಾಗುತ್ತದೆ?

13. ಈ ಕೆಳಗಿನ ಪದ್ಯಭಾಗವನ್ನು ಪೂರ್ತಿಗೊಳಿಸಿರಿ: [ 2 ½ + ½ ]

ಗ್ರಹಣದ ___________

____________________

__________ __________

___________ ನಾನು .

ಪದ್ಯ ಬರೆದ ಕವಿ _____________

**14. ನಾಲ್ಕು ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: [ 2 X 4 = 8 ]**

೧. ಒಂದು ಗಿಣಿಯಲ್ಲಿ ಕೆಟ್ಟಗುಣ ಇನ್ನೊಂದು ಗಿಣಿಯಲ್ಲಿ ಒಳ್ಳೆಯ ಗುಣ ಬರಲು ಕಾರಣವೇನು?

೨. ಒಲಂಪಿಕ್ ಕ್ರೀಡಾ ಸ್ಪರ್ಧೆಗಳನ್ನು ಎಲ್ಲಿ ಏರ್ಪಡಿಸುತ್ತಾರೆ?

೩. ಒಲಂಪಿಕ್ ಜ್ಯೋತಿ ಎಂದರೇನು? ಅದನ್ನು ಬೆಳಗುವುದನ್ನು ಯಾವಾಗಿನಿಂದ ಮತ್ತು ಎಲ್ಲಿಂದ ಪ್ರಾರಂಭಿಸಲಾಯಿತು?

೪. ಪಂಡಿತನು ಎಲ್ಲರ ಮುಂದೆ ತನ್ನ ಬಗ್ಗೆ ಏನೆಂದು ಹೇಳಿಕೊಳ್ಳುತ್ತಿದ್ದನು?

೫. ಅಕ್ಬರನ ಪ್ರಶ್ನೆಗೆ ಬೀರಬಲ್ಲನು ಏನೆಂದು ಉತ್ತರಿಸಿದನು?

೬. ನದಿಯಲ್ಲಿ ಇದ್ದಕ್ಕಿದ್ದಂತೆ ಏನು ಸಂಭವಿಸಿತು?

**15. ಈ ಕೆಳಗಿನ ಪದಗಳಿಗೆ ದ್ವಿತೀಯಾ ಮತ್ತು ತೃತೀಯಾ ವಿಭಕ್ತಿ ಪ್ರತ್ಯಯ ಸೇರಿಸಿ ಪದವನ್ನು ಬರೆಯಿರಿ: [ 4 MARKS ]**

೧. ಪಂಡಿತ        ೨. ರಾಮನು

**16. ಬಿಟ್ಟ ಸ್ಥಳದಲ್ಲಿ ಸರಿಯಾದ ವಿಭಕ್ತಿ ಪ್ರತ್ಯಯ ಸೇರಿಸಿ ಬರೆಯಿರಿ: [ 2 MARKS ]**

೧. ಶಿಕ್ಷಕಿ ರಮೇಶ _____ ಕರೆದರು.

೨. ರವಿಯು ಶಾಲೆ ____ ಹೊರಟಿದ್ದಾನೆ.

**17. ಈ ವಾಕ್ಯಗಳಲ್ಲಿನ ಗೆರೆ ಎಳೆದಿರುವ ಪದದ ವಿಭಕ್ತಿ ಪ್ರತ್ಯಯ ಗುರುತಿಸಿರಿ: [ 2 MARKS ]**

೧. ಒಲಂಪಿಕ್ ಕ್ರೀಡಾಕೂಟಗಳನ್ನು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಏರ್ಪಾಡಿಸುತ್ತಾರೆ.

೨. ಇದು ಮೋಹನನ ಮನೆ.

**18. ಕೆಳಗಿನ ವಾಕ್ಯಗಳ ಕಾಲಗಳನ್ನು ಗುರುತಿಸಿ: [ 3 MARKS ]**

೧. ರಾಮನು ಪುಸ್ತಕವನ್ನು ಹುಡುಕುವನು.

೨. ಪಂಡಿತನು ನದಿಯ ಬಳಿಗೆ ಬಂದನು.

೩. ಅವನು ಶಾಲೆಗೆ ಹೋಗುತ್ತಾನೆ.

**19. ಈ ಪದಗಳ ಕಾಲ ಬದಲಾಯಿಸಿ: [1 MARKS ]**

೧. ಹೋಗುತ್ತಾನೆ        ೨. ಬರುವನು

20. ಈ ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳನ್ನು ಉತ್ತರಿಸಿರಿ: [ 7 marks ]

ಬೆಂಗಳೂರು ಕರ್ನಾಟಕ ರಾಜ್ಯದ ದೊಡ್ಡ ನಗರ ಮತ್ತು ರಾಜಧಾನಿ. ಬೆಂಗಳೂರು ನಗರವು ಕ್ರಿ.ಶ.1537ರಲ್ಲಿ ಯಲಹಂಕ ನಾಡಪ್ರಭು ಕೆಂಪೇಗೌಡರಿಂದ ನಿರ್ಮಾಣವಾಯಿತು. ಭಾರತದ ೫ನೇ ದೊಡ್ಡ ಮಹಾನಗರವಾಗಿರುವ ಬೆಂಗಳೂರು ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ೩ನೇ ಸ್ಥಾನದಲ್ಲಿದೆ. ಜಗತ್ತಿನ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಮಹತ್ತರವಾದ ಕಾಣಿಕೆ ನೀಡುತ್ತಾ ಬಂದಿರುವ ಕಾರಣ ಬೆಂಗಳೂರು ವಿಶ್ವಾದ್ಯಂತ ಭಾರತದ 'ಸಿಲಿಕಾನ್ ವ್ಯಾಲಿ' ಎಂದೇ ಪ್ರಸಿದ್ಧ. ಸಮುದ್ರ ಮಟ್ಟದಿಂದ ಸುಮಾರು ೩೦೦೦ ಅಡಿ (೯೧೪.೪ ಮೀ)ಗಳಿಗಿಂತ ಎತ್ತರದಲ್ಲಿರುವ ಬೆಂಗಳೂರು ನಗರವು ವರ್ಷವಿಡೀ ಆಹ್ಲಾದಕರ ವಾತಾವರಣ ಹೊಂದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕೆರೆಗಳನ್ನು ಹೊಂದಿದೆ. 'ಕಬ್ಬನ್ ಪಾರ್ಕ್', 'ಲಾಲ್ ಬಾಗ್'ಗಳಂತಹ ದೊಡ್ಡ ಉದ್ಯಾನವನಗಳನ್ನು ಹೊಂದಿರುವ ಈ ನಗರವು 'ಉದ್ಯಾನ ನಗರಿ' ಎಂದೂ ಪ್ರಸಿದ್ಧ. ವಿಶ್ವದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯಮಿಗಳ ಅಚ್ಚುಮೆಚ್ಚಿನ ೧೦ ನಗರಗಳಲ್ಲಿ ಬೆಂಗಳೂರು ಕೂಡ ಒಂದು.

ಕಲೆ ಮತ್ತು ಸಂಸ್ಕೃತಿಯ ಬೀಡಾಗಿರುವ ಬೆಂಗಳೂರು ವಿದ್ಯಾಭ್ಯಾಸಕ್ಕೆ ಬಹಳ ಹೆಸರುವಾಸಿ. ಕನ್ನಡವು ಇಲ್ಲಿಯ ಅಧಿಕೃತ ಭಾಷೆ.ಇಲ್ಲಿ ಬಳಕೆಯಲ್ಲಿರುವ ಇತರೆ ಭಾಷೆಗಳೆಂದರೆ ತಮಿಳು, ತೆಲುಗು ಮತ್ತು ಮಲಯಾಳಮ್. ಮುಂಬಯಿ ನಂತರ ಹೆಚ್ಚಿನ ಸಾಕ್ಷರತಾ ಪ್ರಮಾಣ(83%) ಹೊಂದಿದ ಪ್ರದೇಶ ಇದಾಗಿದೆ. "ಬೆಂಗಳೂರು ಹಬ್ಬ"ವು ವರ್ಷಕ್ಕೊಮ್ಮೆ ನಡೆಯುವ ಉತ್ಸವವಾಗಿದ್ದು, ಜನರು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಇದೊಂದು ಉತ್ತಮವಾದ ಅವಕಾಶ ಒದಗಿಸುತ್ತದೆ. ದೀಪಾವಳಿ ಮತ್ತು ಗಣೇಶ ಚತುರ್ಥಿಯು ಇನ್ನೆರಡು ಪ್ರಮುಖ ಹಬ್ಬಗಳಾಗಿದ್ದು ಇಲ್ಲಿಯ ಶ್ರೀಮಂತ ಧಾರ್ಮಿಕ ಸಂಪ್ರದಾಯಕ್ಕೆ ಸಾಕ್ಷಿಯಾಗಿವೆ. ಬೆಂಗಳೂರಿನಲ್ಲಿ ಹಲವು ದೇಶೀಯ ಮತ್ತು ಪಾಶ್ಚ್ಯಾತ್ಯ ಸಂಸ್ಕೃತಿಗಳು ಮಿಲನಗೊಂಡಿವೆ. ಆದುದರಿಂದ ಇದನ್ನು ಈಗ ಕಾಸ್ಮೊಪಾಲಿಟನ್ ಸಿಟಿ ಎಂತಲೂ ಕರೆಯಲ್ಪಡುತ್ತಿದೆ. ಇಲ್ಲಿನ ದೂರದರ್ಶನ ಹಾಗೂ ಆಕಾಶವಾಣಿ ಕೇಂದ್ರಗಳು ಹೆಸರುವಾಸಿ. ದೇಶದ ಮೊದಲ ಖಾಸಗಿ ಎಫ್. ಎಮ್. ರೇಡಿಯೋ, ರೇಡಿಯೋ ಸಿಟಿ ಪ್ರಾರಂಭವಾಗಿದ್ದು ಇಲ್ಲೇ. ಹಾಗೂ ಕರ್ನಾಟಕದ ಮೊಟ್ಟಮೊದಲ ಸಮುದಾಯ ರೇಡಿಯೋಗೆ ಪರವಾನಗಿ ಸಿಕ್ಕಿ ತರಂಗಗಳಲ್ಲಿ ಪ್ರಸಾರವಾದದ್ದು ಇಲ್ಲಿಯೇ. ರೇಡಿಯೋ ಹೆಸರು ರೇಡಿಯೋ ಆಕ್ಟೀವ್ ತರಂಗಾಂತರ ೧೦೭.೮

ಪ್ರತಿಷ್ಠೆಯ ವಿದ್ಯಾ ಸಂಸ್ಥೆಗಳಾದ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಭಾರತೀಯ ವ್ಯವಸ್ಥಾ ಪ್ರಬಂಧ ಸಂಸ್ಥೆ (ಐ.ಐ.ಎಮ್) ಗಳನ್ನು ಇಲ್ಲಿ ಕಾಣಬಹುದು. ಇಷ್ಟೇ ಅಲ್ಲದೆ, ಬಹು ಸಂಖ್ಯೆಯಲ್ಲಿ ಇಂಜಿನೀಯರಿಂಗ್, ಮೆಡಿಕಲ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜುಗಳು ಕೂಡ ಇಲ್ಲಿವೆ.

ಪ್ರಶ್ನೆಗಳು :

೧. ಕಲೆ ಮತ್ತು ಸಂಸ್ಕೃತಿಯ ಬೀಡಾಗಿರುವ ಬೆಂಗಳೂರು ___________ಕ್ಕೆ ಬಹಳ ಹೆಸರುವಾಸಿ.

೨. ಬೆಂಗಳೂರನ್ನು ಯಾರು ನಿರ್ಮಾಣ ಮಾಡಿದರು?

೩. ಬೆಂಗಳೂರಿನಲ್ಲಿರುವ ದೊಡ್ಡ ಉದ್ಯಾನವನಗಳು ಯಾವುವು?

೪. ಬೆಂಗಳೂರು ನಗರ ಯಾವ ಯಾವ ಹೆಸರುಗಳಿಂದ ಕರೆಯಲ್ಪಡುತ್ತಿದೆ?

೫. ಬೆಂಗಳೂರು ಭಾರತದ ________ ದೊಡ್ಡ ಮಹಾನಗರ. ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ _____ ಸ್ಥಾನದಲ್ಲಿದೆ.

೬. ಬೆಂಗಳೂರಿನ ಅಧಿಕೃತ ಭಾಷೆ ______________. ಕರ್ನಾಟಕದ ರಾಜಧಾನಿ ______________.

೭. ಬೆಂಗಳೂರಿನಲ್ಲಿರುವ ಪ್ರತಿಷ್ಠೆಯ ವಿದ್ಯಾಸಂಸ್ಥೆಗಳು ಯಾವುವು?

XXXXXXXXXXXXXXXXXXXXXX